ಮೈಸೂರು ಡಿಸ್ಟ್ರಿಕ್ಟ್.

ತಾರೀಖು 17ನೆ ಮಾಹೆ ನವಂಬರು 1907.

ಸ್ ೧೯೦೮ನೆ ಇಸವಿ ಜನವರಿ ಮಾಹೆ 16ನೆ ತಾರೀಖಿನಲ್ಲಿ ಪ್ರಾರಂಭವಾಗಿ ಒಂದು ವಾರದ ವರಿಗೂ, ಎಡತೊರೆ ತಾಲ್ಲೂಕು ಜುಂಜನಕಟ್ಟೆಯಲ್ಲಿ ನಡಿಯುವ ಶ್ರೀ ರಾಮದೇವರ ರಥೋತ್ಸವ ಕಾಲದಲ್ಲಿ ಗಾಳ್ವೆಮೆಂಟಿನಿಂದ ತಲಬರುವ 17-9-07ನೆ ಮಾರ್ಕಂ ಜ೨೮೫-೨೫-L. B. (೪೬೨-೦೬)-3ನೆ ನಂಬರು ಪ್ರೊಸೀಡಿಂಗ್ಸು ಪ್ರಕಾರ ದನಗಳ ಪ್ರದರ್ಶನವೂ ನಡಿಯುತ್ತೆ. ಬಾಕಿ ತಪಶೀಲುಗಳಿಗೆಲ್ಲಾ 1907ನೆ ನವಂಬರ್ 21ನೆ ಮಾರ್ಕಂ 46ನೆ ನಂಬರು ಮೈಸೂರು ಗೆಜೆಟ್ಟಿನ 2ನೆ ಭಾಗದ 545ನೆ ನಂಬರು ಪುಟದಲ್ಲಿ ನೋಡಬೇಕು.

ಇಸ್ತಿಹಾರ್‌ನಾಮೆ

ತಾರೀಖು 14ನೆ ನವಂಬರ್ 1907.

ತಿರುಮಕೂಡ್ಲು ನರಸೀಪುರ ತಾಲ್ಲೂಕು ಮೂಗೂರು ಹೋಬಳಿಗೆ ಸೇರಿದ ಕಾಯುಂಗುತ್ತ ಹ್ಯಾಳನೂರು ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ತಿರುಮಕೂಡ್ಲು ನರಸೀಪುರ ತಾಲ್ಲೂಕು ಕಛೇರಿಯಲ್ಲಿ 1908ನೆ ಜನವರಿ 30ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲು ಬಗ್ಗೆ 1907ನೆ ನವಂಬರ್ 28ನೆ ಮಾರ್ಕಂ 4 ನೆ ನಂಬರ್ ಮೈಸೂರು ಗೆಜೆಟ್ಟಿನ 11ನೆ ಭಾಗದ 554ನೆ ನಂಬರ್ ಪೇಜು ನೋಡತಕ್ಕದ್ದು.

ಎಂ. ಕಾಂತರಾಜೆ ಅರಸ್,
ಡೆಪ್ಯುಟಿ ಕಮಿಷನರ್.

ನೋಟಸ್.

ಬ ತಾರೀಖು 26ನೆ ನವಂಬರ್ 1907.

ಸ್ ೧೯೦೭ನೆ ನವಂಬರ್ ಮಾಹೆ 21ನೆ ತಾರೀಖಿನ ಮೈಸೂರು ಗೆಜೆಟ್ಟಿನ 2ನೆ ಭಾಗದ 545ನೆ ನಂಬರ್ ಪುಟದಲ್ಲಿ ಜುಂಜನಕಟ್ಟೆ ಜಾತ್ರೆ ಕಾಲದಲ್ಲಿ ನಡೆಯುವ ಪ್ರದರ್ಶನಕ್ಕೆ ಸಂಬಂಧವಾದ ಇಸ್ತಿಹಾರಿನಲ್ಲಿ "ಬಿಟ್ಟರಪೂರ" ಎಂಬುವದಕ್ಕೆ ಬದಲಾಗಿ "ಬಿಟ್ಟದ ದನ" ಎಂಬುವದಾಗಿ ಓದಬೇಕು.

1907ನೆ ಇಸವಿ ನವಂಬರು ತಾರೀಖು 2ನೆ ಶನಿವಾರ ಮಧ್ಯಾಹ್ನ 2 ಘಂಟೆಯಲ್ಲಿ ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುಗಳು ಸೇರಿ ನಡಿಸಿದ ಪ್ರೊಸೀಡಿಂಗ್ಸು.

ಎಕ್ಸ್ ಆಫೀಷಿಯೊ ಮೆಂಬರುಗಳು.

ಹಾಜರು:-

1. ಮೆ॥ ಎಂ. ಕಾಂತರಾಜೆ ಅರಸಿನವರು, ಬಿ.ಎ, ಪ್ರೆಸಿಡೆಂಟ್ ನಾಮೇಬರವರು.
2. ,, ಎಸ್. ವೈದ್ಯನಾಥೈಯ್ಯರವರು, ನೆಂಜನಗೂಡು ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರ್.
3. ,, ಎ. ಸುಬ್ರಹ್ಮಣ್ಯ ಐಯ್ಯರವರು, ಬಿ.ಎ., ಮೈಸೂರು ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರ್.
4. ,, ಬಿ. ಕೃಷ್ಣರಾಯರವರು, ಫಸ್ಟ್ ಕ್ಲಾಸ್ ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರ್.
5. ,, ಟಿ. ಕೆ. ಸುಂದರರಾಜೈಯ್ಯಂಗಾರ್ಯರವರು, ಟ್ರೆಜರಿ ಅಸಿಸ್ಟೆಂಟ್ ಕಮಿಷನರು ಮತ್ತು ವೈಸ್ ಪ್ರೆಸಿಡೆಂಟರು.
6. ,, ಇ. ಎಸ್. ಕೃಷ್ಣಸ್ವಾಮಿ ಐಯ್ಯರವರು, ಬಿ. ಎ., ಎಂ. ಬಿ. ಸಿ. ಎಂ., ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರು.
7. ,, ಬಿ. ಸುಬ್ಬರಾಯರವರು, ಎಲ್. ಸಿ. ಇ., ಮೈಸೂರು ಡಿವಿಜ್ ಎಕ್ಸಿಕ್ಯುಟಿವ್ ಇಂಜಿನಿಯರು.
8. ,, ಎಂ. ರಾಮಸ್ವಾಮಿಐಯ್ಯನವರು, ಬಿ. ಎ., ಮೈಸೂರು ಡಿಸ್ಟ್ರಿಕ್ಟ್ ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರು.

ಇತರ ಮೆಂಬರುಗಳು.

ಲೋಕಲ್ ಬೋರ್ಡ್ ರೂಲ್ಸ್ 3ನೆ ಪ್ಯಾರಾ (ಡಿ) ಕ್ಲಾಸಿನಲ್ಲಿ ನಮೋದಾಗುವ ಮೇರೆ.

9. ಮೆ॥ ಲಿಂಗೇಗೌಡರು, ಮೈಸೂರು ತಾಲ್ಲೂಕು.
10. ,, ಪಡಗೋಪಾಚಾರ್ಯರು, ಎಡತೊರೆ ತಾಲ್ಲೂಕು.
11. ,, ಉಂಡವಾಡಿ ನರಸಿಂಗರಾಯರು, ಹುಣಸೂರು ತಾಲ್ಲೂಕು.
12. ,, ಪಿ. ಸುಬ್ಬರಾಯರು, ಹೆಗ್ಗಡದೇವನಕೋಟೆ ತಾಲ್ಲೂಕು.
13. ,, ಶಾಮೈಯ್ಯಂಗಾರ್ಯರು, ಚಾಮರಾಜನಗರ ತಾಲ್ಲೂಕು.
14. ,, ಟಿ. ಎಸ್. ಕೃಷ್ಣರಾಯರು, ನಂಜನಗೂಡು ತಾಲ್ಲೂಕು.
15. ,, ಗರುಡಾಂ ವೆಂಕಟ್ರಾವ್ ಣಾಪ್ಟರು, ತಿ. ನರಸೀಪುರ ತಾಲ್ಲೂಕು.
16. ,, ಬಿ. ನರಸಿಂಗರಾಯರು, ಶ್ರೀರಂಗಪಟ್ಟಣ ತಾಲ್ಲೂಕು.
17. ,, ಕೃಷ್ಣಶಾಸ್ತ್ರಿಗಳು, ಕೃಷ್ಣರಾಜಪೇಟೆ ತಾಲ್ಲೂಕು.

18. ,, ಚಂದ್ರಶೇಖರೈಯ್ಯನವರು, ನಾಗಮಂಗಲ ತಾಲ್ಲೂಕು.
19. ,, ಶಂಕರಯ್ಯನವರು, ಮಳವಳ್ಳಿ ತಾಲ್ಲೂಕು.
20. ,, ಎಂ. ಜಿ. ಶಾಮೈಯ್ಯಂಗಾರ್ಯರವರು, ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು.
21. ,, ಗುರುಕಾರ್ ನಂಜಪ್ಪನವರು, ಗುಂಡ್ಲುಪೇಟೆ ತಾಲ್ಲೂಕು.
22. ,, ಬಸರಾಳು ಲಿಂಗಂಶೈಯ್ಯನವರು, ಮಂಡ್ಯ ತಾಲ್ಲೂಕು.

ಲೋಕಲ್ ಬೋರ್ಡ್ ರೂಲ್ಸ್ 8ನೆ ಪ್ಯಾರಾ (ಇ) ಕ್ಲಾಸ್ ಮೇರೆ.

23. ,, ಬಳ್ಳೇನವಂಣನವರು, ಎಡತೊರೆ ತಾಲ್ಲೂಕು.
24. ,, ಚಿಕ್ಕನುಬ್ಬರಾಯರು, ಹುಣಸೂರು ತಾಲ್ಲೂಕು.
25. ,, ಎ. ಅಂಶೈಯ್ಯಪಂಡಿತರು.
26. ,, ವಿ. ರಾಘವಾಚಾರ್ಯರವರು, (ಗೈರ್ಹಾಜರು).
27. ,, ರೆವರೆಂಡ್ ಡಿ. ಎಫ್. ಲ್ಯಾರೆಟ್ ಸಾಹೇಬರವರು, ಗಂಜಾಂ ಟರ್ವ, ಕ್ಯಾಥಲಿಕ್ ಪಾದ್ರಿಗಳು.
28. ,, ಟ. ಎ. ವಿಾರ್ಕಮಾಲುದ್ದೀನ್ ಅಲ್ಲೀಖಾ ಸಾಹೇಬರವರು, ರಿಟೈರ್ಡ್ ಅಸಿಸ್ಟೆಂಟ್ ಕಮಿಷನರವರು ಮತ್ತು ಹುಜೂರು ಮುಖ್ಯ ಸಾಹೇಬರು.
29. ,, ವೆಂಕಟಸಾವೈಯ್ಯನವರು, ಚಾಮರಾಜನಗರ ತಾಲ್ಲೂಕು.
30. ,, ಕೃಪಾಚಾರ್ಯರು, ತಿ. ನರಸೀಪುರ ತಾಲ್ಲೂಕು.

ನೋಟ್:—ಹೆಗ್ಗಡದೇವನಕೋಟೆ ಮತ್ತು ನಾಗಮಂಗಲದ ತಾಲ್ಲೂಕುಗಳ ಅಮಲ್ದಾರ್‌ರುಗಳು ವಿನಹ ಬಾಕಿ ಎಲ್ಲಾ ತಾಲ್ಲೂಕು ಅಮಲ್ದಾರ್‌ರುಗಳು ಹಾಜರಾಗಿದ್ದರು. ಶ್ರೀರಂಗಪಟ್ಟಣದ ತಾಲ್ಲೂಕು ಅಮಲ್ದಾರ್‌ರವರು ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು ಛಾರ್ಜಿನಲ್ಲಿದ್ದಾರೆ.

1. ಈ ಕೆಳಿಗೆ ನಮೂದಾಗುವವುಗಳನ್ನು ಓದಿ ರಿಕಾರ್ಡ್ ಮಾಡಲಾಯಿತು.

(a) ಅಜವಾಯಿಷಿ ತರೀಖು ಕೆಲಸ ಮಾಡುವದಕ್ಕಾಗಿ ಒಂದು ಸಾವಿರ ರೂಪಾಯಿ ಬೆಲೆ ಬಾಳುವ ಭಾವಿ ತೋಡುವ ಕೆಲಸದ ಯಂತ್ರಗಳನ್ನು ಕೋಲಾರದ ಡಿಸ್ಟ್ರಿಕ್ಟ್ ಪೆಪ್ಯುಟ ಕಮಿಷನರವರು ಕೊಂಡುಕೊಳ್ಳಬಹುದೆಂದು ಗವರ್ನಮೆಂಟಿನಿಂದ ಸಾದರಾಗಿರುವ 7—8—1907ನೆ ಮಕ್ರುಂ R. 971-81—Agri. 121-06-5ನೆ ನಂಬರು ಹುಕುಂ:—

(b) ಮೈಲೇಜು ಮತ್ತು ಭತ್ಯ ತೆಗದುಕೊಳ್ಳುವದಕ್ಕೆ ಅನರ್ಹರಾದ ಸರ್ಕಾರಿ ನೌಕರಮಾನೇರು, ಸರ್ಕಾರಿ ಕೆಲಸದ ಮೇಲೆ ಸಂಚಾರ ಮಾಡುತ್ತಿರುವಾಗ ಟೋಲ್ ಎಂಬ ಸುಂಕ ಕೊಡೋಣದರಿಂದ ವಿನಾಯಿಸಲ್ಪಡಬೇಕೆಂದು ಗವರ್ನಮೆಂಟಿನಿಂದ ತಲಪಿರುವ 10—8—1907ನೆ ಮಕ್ರುಂ 1360-8—L. B. 393-06-2ನೆ ನಂಬರು ಆರ್ಡರು.

(c) ಅಮೃತಮಹಲ್ ಗೂಳಿಗಳನ್ನು ಸರಬರಾಯಿ ಮಾಡತಕ್ಕ ವಿಚಾರದಲ್ಲಿ ಗವರ್ನಮೆಂಟಿನಿಂದ ಸಾದರಾಗಿರುವ 9—9—1907ನೆ ಮಕ್ರುಂ 2311-9—L. B. 285-06-2ನೆ ನಂಬರು ಆರ್ಡರು.

(d) ಎಡತೊರೆ ತಾಲ್ಲೂಕು ಚುಂಚನಕಟ್ಟೆಯಲ್ಲಿ ನಡೆಯುವ ವಾರ್ಷಿಕ ದನಗಳ ಪ್ರದರ್ಶನದ ಸಂದರ್ಭದಲ್ಲಿ ಬಹುಮಾನ ಕೊಡುವದಕ್ಕಾಗಿ ಮುಜರಾಯಿ ಫಂಡಿನಿಂದ 100 ರೂಪಾಯಿಯೂ ಡಿಸ್ಟ್ರಿಕ್ಟ್ ಫಂಡಿನಿಂದ 100 ರೂಪಾಯಿಯೂ ಜುಮ್ಲಾ ಎರಡುನೂರು ರೂಪಾಯಿಗಳನ್ನು ಮಂಜೂರು ಮಾಡಿರುವದಾಗಿ ಗವರ್ನಮೆಂಟಿನಿಂದ ಸಾದರಾಗಿರುವ 17—9—07ನೆ ಮಕ್ರುಂ 2585-95—L. B. 462-06-3ನೆ ನಂಬರು ಆರ್ಡರು.

(e) ಯೂನಿಯನ್ ಸ್ಥಾಪನೆ ಮಾಡಲ್ಪಟ್ಟ ಗ್ರಾಮಗಳಿಗೆ ಎಡಾವಣೆಗಾಗಿ ಬೇಕಾಗುವ ನಿವೇಶನಗಳ ಲಾಗವಡು ಪೊಬಲಿಗನ್ನು ಗವರ್ನಮೆಂಟಿನಿಂದ ಕೊಡಬೇಕೆಂದು ಗವರ್ನಮೆಂಟಿನಿಂದ ತಲಪಿರುವ 25—9—1907ರ ಮಕ್ರುಂ R. 2233-42—L. R. 184-07-ನೆ ನಂಬರು ಆರ್ಡರು.

(f) ಹೋಬಳಿ ಸ್ಕೂಲ್ ಮತ್ತು ತಾಲ್ಲೂಕು ಬ್ಯಾಂಡು ಸ್ಕೂಲುಗಳ ಅಪ್ಪರ್‌ಪ್ರೈಮರಿ II ಮತ್ತು III ನೆ ತರಗತಿಗಳಲ್ಲಿ ವ್ಯಾಸಂಗ ಮಾಡುವ ಬಾಲಕರಿಂದ ಫೀ ವಸೂಲ್ಮಾಡುವಿಕೆಯನ್ನು ರಜಾ ಮಾಡಿರುವದಾಗಿ ಗವರ್ನಮೆಂಟಿನಿಂದ ಸಾದರಾಗಿರುವ 4—10—1907ನೆ ಮಕ್ರುಂ 3116-32—Ed. 261-06-3ನೆ ನಂಬರು ಆರ್ಡರು.

2. ಟೋಲು ಗೇಟುಗಳು ಸ್ಥಾಪನೆಯಾಗಿರುವ ಪ್ರದೇಶದ ಅಜಾ ಬಾಜೂ ಗ್ರಾಮಾಂತರಗಳಲ್ಲಿ ವಾಸಮಾಡಿಕೊಂಡು ಗಾಡಿಗಳನ್ನು ಇಟ್ಟುಕೊಂಡಿರುವ ವ್ಯವಸಾಯಗಾರರು ಮತ್ತು ಇತರರು ಟೋಲು ಕಂಟ್ರಾಕ್ಟರ ಸಂಗಡ ವರ್ಷಾಕಾಲದ ಪೊತ್ತಿದ ಪೊಬಲಿಗಾಗಿ ನಿಗದಿ ಮಾಡಿಕೊಳ್ಳಬಹುದೆಂದು ಗವರ್ನಮೆಂಟಿನಿಂದ ತಲಪಿದ 10—8—07ನೆ ಮತ್ತು ಂ 1360-76—L. B. 81-05-16ನೆ ನಂಬರು ಆರ್ಡರನ್ನು ಓದಲಾಯಿತು.

ಗಾಡಿಗಳ ಮಾಲೀಕರು ಒಂದು ವರುಷದ ನಿಗದಿ ಪೊಬಲಿಗಾಗಿ ಟೋಲು ಕಂಟ್ರಾಕ್ಟರಿಗೆ ಪರ್ಷದ ಒಟ್ಟು ಪೊಬಲಿಗನ ಪೈಕಿ $\frac{1}{8}$ ಭಾಗ ಪೊಬಲಗು ಕೊಡುವ ಸಂದರ್ಭದಲ್ಲಿ ಬಡ ರೈತರಿಗೆ ತುಂಬಾ ತೊಂದರೆಯಾಗುವದ್ದರಿಂದ ಬೋರ್ಡಿನವರು 1901ನೆ ಇಸವಿ ಫಿಬ್ರವರಿ 16ನೆ ಮತ್ತು ಂನಲ್ಲಿ ನಡೆದ ಮೀಟಿಂಗಿನಲ್ಲಿ ಮಾಡಿರುವ ತೀರ್ಮಾನವನ್ನು ಪುನರಾಲೋಚನೆಗೆ ತರಬೇಕೆಂತಲೂ, ವರ್ಷಾಂತ್ಯದ ಒಟ್ಟು ಪೊಬಲಗು ಪೈಕಿ $\frac{1}{8}$ ಭಾಗ ಕೊಡುವದಕ್ಕೆ ಬದಲಾಗಿ $\frac{1}{16}$ ಭಾಗ ಪೊಬಲಗನ್ನು ವಸೂಲು ಮಾಡಿಕೊಳ್ಳಲು ಹುಕುಂ ಕೊಡಿಸತಕ್ಕ ವಿಚಾರದಲ್ಲಿ ಗವರ್ನಮೆಂಟಿಗೆ ರಿಪೋರ್ಟ್ ಮಾಡಬೇಕೆಂದು ತೀರ್ಮಾನವಾಯಿತು.

3. ಮೈಸೂರು ಸೀಮೆಯಲ್ಲಿ ಆರೋಗ್ಯಾಭಿವೃದ್ಧಿಗಾಗಿ "ಪಬ್ಲಿಕ್ ಹೆಲ್ತ್ ಡಿಪಾರ್ಟ್‌ಮೆಂಟ್" ಎಂಬದಾಗಿ ಬಂದು; ಇಲಾಖೆಯನ್ನು ಏರ್ಪಾಡು ಮಾಡಿರುವದಾಗಿ ಗವರ್ನಮೆಂಟಿನಿಂದ ಸಾದರಾದ 10—8—07ನೆ|ಮರು ಂ 1378-92—San. 93-06-8ನೆ ನಂಬರು ಆರ್ಡರು ಮತ್ತು ಡಿಸ್ಟ್ರಿಕ್ಟ್ ಸ್ಯಾನಿಟೆರಿ ಬೋರ್ಡು ಏರ್ಪಾಡಾಗತಕ್ಕ ವಿಚಾರ ಈ ಬೋರ್ಡಿಗೆ ಕೊಡಬೇಕಾದ ಅಧಿಕಾರ, ಇವರ ಆಡಳಿತದಲ್ಲಿ ಇಡತಕ್ಕ ಧಂಡಿನ ಮೊತ್ತ, ಈ ವಿಚಾರದಲ್ಲಿ ಬೋರ್ಡಿನವರ ಸಲಹೆಗಳನ್ನು ತಿಳಿಸಬೇಕೆಂದು ಸ್ಯಾನಿಟೆರಿ ಕಮಿಷನರವರಿಂದ ತಲಪಿರುವ 26—8—07ನೆ ಮಕ್ಕಂ 639-46ನೆ ನಂಬರು ಸರ್ತಿಲರನ್ನು ಸಹ ಓದಲಾಯಿತು.

ಮೇಲ್ಕಂಡ ಗವರ್ನಮೆಂಟ್ ಆರ್ಡರ್‌ನಿನಂತೆ ಒಂದು ಡಿಸ್ಟ್ರಿಕ್ಟ್ ಸ್ಯಾನಿಟೆರಿ ಬೋರ್ಡನ್ನು ಏರ್ಪಾಡು ಮಾಡಬೇಕೆಂತಲೂ, ಈ ಬೋರ್ಡಿಗೆ ಬೇಕಾದ ಉದ್ಯೋಗದರೆಹಿತರಾದ 2 ಮೆಂಬರುಗಳನ್ನು ಪ್ರೆಸಿಡೆಂಟರು ಡಿಸ್ಟ್ರಿಕ್ಟ್ ಬೋರ್ಡು ಮೆಂಬರುಗಳ ಪೈಕಿ ಚುನಾಯಿಸಬಹುದೆಂತಲೂ, ಈ ಸ್ಯಾನಿಟೆರಿ ಬೋರ್ಡು ಆರೋಗ್ಯ ಸಂಬಂಧವಾದ ವಿಚಾರಗಳೆಲ್ಲಾ ಡಿಸ್ಟ್ರಿಕ್ಟ್ ಬೋರ್ಡಿಗೆ ಅಡ್ವೈಸರಿ ಬಾಡಿಯಾಗಿರಬೇಕೆಂತಲೂ, ಕರ್ಚರ್ವೇಸಿ ಮತ್ತು ಆರೋಗ್ಯ ಸಂಬಂಧವಾದ ಬಾಬುಗಳಿಗೆ ಡಿಸ್ಟ್ರಿಕ್ಟ್ ಧಂಡಿನಿಂದ ವಿಧಾಯಕ ಮಾಡಿಕೊಡಲ್ಪಡುವ ಧಂಡನ್ನು ಡಿಸ್ಟ್ರಿಕ್ಟ್ ಸ್ಯಾನಿಟೆರಿ ಬೋರ್ಡಿನವರ ಅನುಮತಿ ಪಡೆದು ಖರ್ಚು ಮಾಡಬೇಕೆಂತಲೂ ಸಹ ತೀರ್ಮಾನಿಸಲಾಯಿತು.

4. ಮೈಸೂರು ಸಿಟಿ ನಜರುಬಾದು ಮೊಹಲ್ಲಾದಲ್ಲಿ ಆಸ್ಪತ್ರೆ ಇಡಲ್ಪಟ್ಟಿರುವ ಕಟ್ಟಡಕ್ಕೆ ಮಾಹೇಯಾನಾ ಕೊಡಲ್ಪಡುವ ಬಾಡಿಗೆಯನ್ನು 8 ರೂಪಾಯಿನಿಂದ ಹತ್ತು ರೂಪಾಯಿಗೆ ಬಡಾಯಿಸಬೇಕೆಂದು ಮೈಸೂರು ಸಿಟಿ ಮ್ಯುನಿಸಿಪಲ್ ಕಮಿಷನರವರು ಸಲಹೆ ಕೊಟ್ಟಿರುವದರ ವಿಚಾರದಲ್ಲಿ ಡಿಸ್ಟ್ರಿಕ್ಟ್ ಧಂಡಿನಿಂದ ದಾವಾಖಾಯಿ ವೇರೆ ಕೊಡಲ್ಪಡಬೇಕಾಗುವ ಮೊಬಲಗಿನ ವಿಚಾರದಲ್ಲಿ ಇರಾದೆ ತಿಳಿಸಬೇಕೆಂದು ಗವರ್ನಮೆಂಟಿನಿಂದ ಸಾದರಾದ 27—8—07ನೆ ಮಕ್ಕಂ 1862—Ml. 12-07-2ನೆ ನಂಬರು ಆರ್ಡರನ್ನು ಓದಲಾಯಿತು.

ಡಿಸ್ಟ್ರಿಕ್ಟ್ ಧಂಡಿನಿಂದ ದಾವಾಖಾಯಿನಂತೆ ಕೊಡಲ್ಪಡಬೇಕಾಗುವ ಮೊಬಲಗನ್ನು ಕೊಡಿಸಬಹುದೆಂದು ತೀರ್ಮಾನಿಸಲಾಯಿತು.

5. ಮಂಡ್ಯದ ತಾಲ್ಲೂಕು ಮದ್ದೂರು ರೈಲ್ವೆ ಸ್ಟೇಷನ್ ಬಳಿ ಇರುವ ಶಿವಪುರದ ಛತ್ರವನ್ನು ಡಿಸ್ಟ್ರಿಕ್ಟ್ ಬೋರ್ಡಿನ ಆಡಳಿತಕ್ಕೆ ವರ್ಗ ಮಾಡಿರುವದಾಗಿ ಗವರ್ನಮೆಂಟಿನಿಂದ ಸಾದರಾದ 2—9—07ನೆ ಮಕ್ಕಂ 1287-9—Muz. ನೆ ನಂಬರು ಆರ್ಡರು ಬಂದು, ಡಿಸ್ಟ್ರಿಕ್ಟ್ ಬೋರ್ಡಿನವರು ಈ ಛತ್ರವನ್ನು ಮುಸಾಫರಖಾನೆಯಾಗಿ ಮಾಡಿಕೊಂಡು ಉತ್ತಮ ಸ್ಥಿತಿಯಲ್ಲಿ ಇಟ್ಟುಕೊಳ್ಳಲು ಮತ್ತು ಈ ಮುಸಾಫರಖಾನೆಯ ಶಿಬ್ಬಂದಿ ಖರ್ಚನ್ನು ವಹಿಸಿಕೊಳ್ಳುವ ವಿಚಾರದಲ್ಲಿ ಸಹ ಡಿಸ್ಟ್ರಿಕ್ಟ್ ಬೋರ್ಡಿನ ಅಭಿಪ್ರಾಯವನ್ನು ತಿಳಿಸಬೇಕೆಂದು ಗವರ್ನಮೆಂಟಿನಿಂದ ಸಾದರಾದ 1—10—07ನೆ ಮಕ್ಕಂ. 3030—L. B. 87-07-2ನೆ ನಂಬರು ಡಾಕೆಟ್ ಬಂದು, ಮಂಡ್ಯದ ತಾಲ್ಲೂಕು ಬೋರ್ಡಿನವರು ಅಭಿಪ್ರಾಯನಿಶಿ ಆ ತಾಲ್ಲೂಕು ಅಮಲ್ದಾರ್ರು ಛತ್ರದ ರಿಪೇರಿ ಬಗ್ಯೆ ಹಾಲಿ ಬೇಕಾಗುವ ಅಂದಾಜು ಮೊಬಲಗು 1,80 ರೂಪಾಯಿಗೆ ಕಳುಹಿಸಿರುವ ಅಂದಾಜು ಶಿಬ್ಬಂದಿ ಖರ್ಚಿನ ತಖ್ತೆ ಬಂದು ಇವು ಮೂರನ್ನು ಓದಲಾಯಿತು.

ಡಿಸ್ಟ್ರಿಕ್ಟ್ ಬೋರ್ಡಿನ ಆಡಳಿತಕ್ಕೆ ಈ ಕಟ್ಟಡವನ್ನು ತೆಗದುಕೊಳ್ಳಬೇಕೆಂತಲೂ ಸಾಲಿಯಾನಾ ಆಗಬೇಕಾದ ರಿಪೇರಿ ಮಾಡಿಸಬೇಕೆಂತಲೂ ಗವರ್ನಮೆಂಟಿನವರ ಮಂಜೂರಾತಿಯಿಂದ ಈ ಕಟ್ಟಡಕ್ಕೆ ಮಾಹೆಯಾನಾ 7 ರೂಪಾಯಿ ತಲಬಿನ ಮೇಲೆ ಒಬ್ಬ ಕಾವಲುಗಾರ ಪ್ರತಿ ಒಬ್ಬನಿಗೂ ಮಾಹೆಯಾನಾ ಒಂದು ರೂಪಾಯಿ ವೇತನದ ಮೇರೆ ಒಬ್ಬ ಝಾಡಮಾಲಿ ಮತ್ತು ಒಬ್ಬ ಹಲಾಲುಕೋರರವನೆನ್ನು ಮೊಕರೂರು ಮಾಡಿಕೊಳ್ಳಬಹುದೆಂತಲೂ ಸಹ ತೀರ್ಮಾನಿಸಲಾಯಿತು.

6. ಅಮೃತಮಹಲ್ ಗೂಳಿಗಳ ಖರೀದಿ ಮೊಬಲಗಿನ ಪೈಕಿ ಅರ್ಧ ಮೊಬಲಗನ್ನು ಡಿಸ್ಟ್ರಿಕ್ಟ್ ಧಂಡಿನಿಂದ ಕೊಡಲ್ಪಡುವ ವಿಚಾರದಲ್ಲಿ ಗವರ್ನಮೆಂಟಿನಿಂದ ವಿಧಾಯಕವಾಗಿರುವ 16-9-1891ನೆ ಮಕ್ಕಂ 6999-7008 Cir: 123ನೆ ನಂಬರು ಆರ್ಡರು ವೇರೆ ಈ ವಿಚಾರದಲ್ಲಿ ಬರತಕ್ಕ ದರಿಖಾಸ್ತುಗಳನ್ನು ಫೈಸಲು ಮಾಡಬೇಕೆಂದು ಗವರ್ನಮೆಂಟಿನಿಂದ ತಲಪಿರುವ 2—9—1907ನೆ ಮಕ್ಕಂ 2093-4—L. B. 49-07-2ನೆ ನಂಬರು ಆರ್ಡರು ಒಂದು. ರೆವರೆಂಡ್ ಡಿ. ಎಫ್. ಲ್ಯಾರೆಟ್ ಸಾಹೇಬರಿಗೆ ಕೊಡಿಸಿದ ಗೂಳಿಯ ಬಾಬತು ಅರ್ಧ ಖರೀದಿ ಮೊಬಲಗನ್ನು ಡಿಸ್ಟ್ರಿಕ್ಟ್ ಧಂಡಿನಿಂದ ಕಳುಹಿಸಿಕೊಡಬೇಕೆಂದು ಅಮೃತಮಹಲ್ ಇಲಾಖಾ ಸೂಪರ್‌ಟೆಂಡೆಂಟರವರಿಂದ ತಲಪಿದ 5—10—07ನೆ ಮಕ್ಕಂ 35ನೆ ನಂಬರು ಯಾದಾಸ್ತು ಸಹ ಓದಲಾಯಿತು.

ಸೂಪರ್‌ಟೆಂಡೆಂಟರವರು ಕೇಳುವ ಮೊಬಲಗನ್ನು ಡಿಸ್ಟ್ರಿಕ್ಟ್ ಧಂಡಿನಿಂದ ಕೊಡಬಹುದೆಂದು ತೀರ್ಮಾನಿಸಲಾಯಿತು.

7. ಕೆಲವು ಸಲಹೆಗಳು ನಿಶಿ ಡಿಸ್ಟ್ರಿಕ್ಟ್ ಧಂಡಿ ಅರ್ಜೂರ್ತಿ ಕಾವಲುಗಾರಿಗೆಗಳನ್ನು ಮಂಜೂರು ಮಾಡಿರುವದಾಗಿ ಗವರ್ನಮೆಂಟಿನಿಂದ ಸಾದರಾಗಿರುವ 17—10—1907ನೆ ಮಕ್ಕಂ 3302-3—L. B. 112-07-2ನೆ ನಂಬರು ಆರ್ಡರನ್ನು ಓದಲಾಯಿತು.

"ಡಿಸ್ಟ್ರಿಕ್ಟ್ ಧಂಡು" ಮದ್ದಿನಲ್ಲಿ ಒಂದು ಲಕ್ಷ ರೂಪಾಯಿಗಳಿಗಿಂತಲೂ ಜಾಸ್ತಿಯಾಗಿ ಶಿಲ್ಕು ಉಳಿದಿರುವದ್ದರಿಂದ ಈ ಹಣದಿಂದ ಕಾವಲುಗಾರಿಗಳನ್ನು ನಡೆಸಲು ಮಂಜೂರಾತಿ ಬಗ್ಯೆ ಗವರ್ನಮೆಂಟನ್ನು ಪ್ರಾರ್ಥಿಸಬೇಕೆಂದು ತೀರ್ಮಾನಿಸಲಾಯಿತು.

8. 1907ನೆ ಸಾಲ್ ಇಂಡಸ್ಟ್ರಿಯಲ್ ಮತ್ತು ಅಗ್ರಿಕಲ್ಚರಲ್ ಎಗ್ಸಿಬಿಷನ್ ಸಂದರ್ಭದಲ್ಲಿ ಒಂದು ಹೆಲ್ತ್ ಸೆಕ್ಷನ್ ಅಥವಾ "ಆರೋಗ್ಯಪ್ರದರ್ಶನ" ಸ್ಥಾಪಿಸತಕ್ಕ ವಿಚಾರದಲ್ಲಿ ಮೈಸೂರು ಸಿಟಿ ಮ್ಯುನಿಸಿಪಲ್ ಧಂಡಿನಿಂದ 300 ರೂಪಾಯಿಗಳನ್ನು ಕೊಡಿಸುವಂತೆಯೂ ಡಿಸ್ಟ್ರಿಕ್ಟ್ ಬೋರ್ಡಿನ ಅನುಮತಿ ನಿಶಿ ಡಿಸ್ಟ್ರಿಕ್ಟ್ ಧಂಡಿನಿಂದ 200 ರೂಪಾಯಿಗಳನ್ನು ಕೊಡಿಸುವಂತೆಯೂ

ಸಹ ಗವರ್ನಮೆಂಟಿನಿಂದ ಸಾದರವಾದ 22—10—1907ನೆ ಮುಕ್ಕಂ 3560-4—220-07-4ನೆ ನಂಬರು ಆರ್ಡರನ್ನು ಓದಲಾಯಿತು.

ಗವರ್ನಮೆಂಟ್ ಆರ್ಡರನ್ನು ಅನುಮೋದಿಸಿರುವದಾಗಿ ತೀರ್ಮಾನವಾಯಿತು.

9. ಶ್ರೀರಂಗಪಟ್ಟಣದ ಆಸ್ಪತ್ರೆ ಬಡಾವಣೆಗಾಗಿ ತಗಲುವ ಮೊಬಲಗಿನ ಪೈಕಿ ಅರ್ಧ ಮೊಬಲಗನ್ನು ಡಿಸ್ಟ್ರಿಕ್ಟ್ ಫಂಡಿನಿಂದ ಕೊಡಿಸತಕ್ಕ ವಿಚಾರದಲ್ಲಿ ಗವರ್ನಮೆಂಟಿನಿಂದ ಸಾದರವಾಗಿರುವ 10—10—07ನೆ ಮುಕ್ಕಂ 3246—Med. 159-06-4ನೆ ನಂಬರ್ ಆರ್ಡರನ್ನು ಓದಲಾಯಿತು.

ಈ ಮೊಬಲಗನ್ನು ಡಿಸ್ಟ್ರಿಕ್ಟ್ ಫಂಡಿನಿಂದ ಕೊಡಿಸಬಹುದೆಂದು ತೀರ್ಮಾನವಾಯಿತು.

10. ಶ್ರೀರಂಗಪಟ್ಟಣ ಚಾಮರಾಜನಗರದ ರಸ್ತೆಯ ಸ್ಪೆಷಲ್ ಕಾಮಗಾರಿಗಾಗಿ 3,253 ರೂಪಾಯಿಗಳ ಅಂದಾಜಾ ನಿಕೆ ತಲುಪಿದ ಮೈಸೂರು ಡಿವಿಜ್ ಎಕ್ಸಿಕ್ಯೂಟಿವ್ ಇಂಜನೀರವರ 16—8—07ನೆ ಮುಕ್ಕಂ 755ನೆ ನಂಬರ್ ಡಾಕೆಟ್ ಓದಲಾಯಿತು.

ಈ ಅಂದಾಜಾವನ್ನು ಮಂಜೂರು ಮಾಡಿರುವದಾಗಿಯೂ 1907ನೆ ಜುಲೈ 1ನೆ ತಾರೀಖಿನಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನ ಶಿಲ್ಕಿನಲ್ಲಿ ಉಳಿದಿರುವ ಮೊಬಲಗು ಪೈಕಿ ಅಂದಾಜಾದ ಅರ್ಧ ಮೊಬಲಗನ್ನು ಮಾತ್ರ ಉಪಯೋಗಿಸಿಕೊಳ್ಳಬೇಕೆಂತಲೂ ಸಹ ತೀರ್ಮಾನವಾಯಿತು.

11. ಇನಾಂ ಕಗ್ಗಲೀಪುರ ಗ್ರಾಮದ ಮೈನರ್ ಕೆರೆಯ ಮೇಲ್ಬಾಗದಲ್ಲಿ ಬರುವ ಶ್ರೀರಂಗಪಟ್ಟಣ-ಸೋಸಲೆ-ಶಿವಸಮುದ್ರದ ರಸ್ತೆಯ ಒಂದು ಭಾಗವನ್ನು ರಿಪೇರಿ ಮಾಡಿಸಿದ್ದಕ್ಕಾಗಿ ತಗಲಿದ ಮೊಬಲಗು ಪೂರ್ತಿ ಡಿಸ್ಟ್ರಿಕ್ಟ್ ಫಂಡಿಗೆ ಛಾರ್ಜ್ ಮಾಡಬೇಕೆಂದು ಮೈಸೂರು ಡಿವಿಜ್ ಎಕ್ಸಿಕ್ಯೂಟಿವ್ ಇಂಜನೀರವರಿಂದ ತಲುಪಿದ 19—9—1907ನೆ ಮುಕ್ಕಂ 343ನೆ ನಂಬರು ಡಾಕೆಟ್ಟನ್ನು ಓದಲಾಯಿತು.

ಈ ರಸ್ತೆಯು ಕೆಲವು ಭಾಗ ಕೆರೆಯ ಕಟ್ಟೆಯಾಗಿರುವದ್ದರಿಂದಲೂ, ಕೆರೆಯ ಉತ್ತಮ ಸ್ಥಿತಿಯು ರಸ್ತೆಯ ಅನುಕೂಲ್ಯ ಸ್ಥಿತಿಯಲ್ಲಿಯೇ ಸೇರಿರುವದ್ದರಿಂದಲೂ ಸಹ, ಆ ಗ್ರಾಮದ ಇನಾಂದಾರರು ಖರ್ಚಾದ ಒಟ್ಟು ಮೊಬಲಗಿನ ಪೈಕಿ ಅರ್ಧ ಮೊಬಲಗು ಕೊಡಬೇಕೆಂತಲೂ, ಬಾಕಿ ಅರ್ಧ ಮೊಬಲಗನ್ನು ಡಿಸ್ಟ್ರಿಕ್ಟ್ ಫಂಡಿಗೆ ಛಾರ್ಜ್ ಮಾಡಬೇಕೆಂತಲೂ ಸಹ ತೀರ್ಮಾನವಾಯಿತು.

12. ಫ್ರೆಂಚ್‌ರಾಕ್ಸ್-ನೆಲ್ಲಿಗೆರೆ ರಸ್ತೆಯ 14ನೆ ಮೈಲಿಯಲ್ಲಿರುವ ಸೇತುವೆಗೆ ಇನ್ನು 2 ಕಮಾನುಗಳನ್ನು ಸೇರಿಸಿ ಕಟ್ಟುವ ಪಕ್ಕಾಗಿ ತಯಾರಾದ 390 ರೂಪಾಯಿಗಳ ಅಂದಾಜಾನಿಕೆ ಮೈಸೂರು ಡಿವಿಜ್ ಎಕ್ಸಿಕ್ಯೂಟಿವ್ ಇಂಜನೀರವರಿಂದ ತಲುಪಿದ 9—9—07ನೆ ಮುಕ್ಕಂ 871ನೆ ನಂಬರು ಡಾಕೆಟ್ಟನ್ನು ಓದಲಾಯಿತು.

ಈ ಮೊಬಲಗನ್ನು ಚಾಲ್ತಿ ಸಾಲಿಗೆ ಅಡಿಷನಲ್ ಗ್ರಾಂಟಾಗಿ ಮಂಜೂರು ಮಾಡಲು ಗವರ್ನಮೆಂಟಿಗೆ ಶಿಫಾರಸ್ ಮಾಡ್ವಂತೆ ತೀರ್ಮಾನವಾಯಿತು.

13. ಹುಣಸೂರು ತಾಲ್ಲೂಕು ಪರಿಯಾಪಟ್ಟಣಕ್ಕೆ ಒಬ್ಬ ಸೂಲಗಿತ್ತಿಯನ್ನು ಮೊಕರೂರು ಮಾಡಿಸಿಕೊಡಬೇಕೆಂದು ಹುಣಸೂರು ತಾಲ್ಲೂಕು ಅಮಿಲ್ದಾರರಿಂದ ತಲುಪಿದ 14—5—07ನೆ ಮುಕ್ಕಂ 352ನೆ ನಂಬರು ರಿಪೋರ್ಟನ್ನು ಓದಲಾಯಿತು.

ಈ ಸಲಹೆಯನ್ನು ಮಂಜೂರು ಮಾಡಬಹುದೆಂದು ತೀರ್ಮಾನಿಸಲಾಯಿತು.

14. ಅಳಗಂಚಿಯಿಂದ ನಂಜನಗೂಡು-ತಗಡೂರು ರಸ್ತೆಗೆ ಬಂದು ಸೇರುವ ಸಾಗೆ ಬಂದು ಭಂಡಿ ದಾರಿಯನ್ನು ಹಾಕತಕ್ಕ ವಿಚಾರದಲ್ಲಿ 635 ರೂಪಾಯಿಗಳಿಗೆ ಬಂದು ಅಂದಾಜಾನಿಕೆ ಈ ಮೊಬಲಗಿನ ಪೈಕಿ ಅರ್ಧ ಮೊಬಲಗನ್ನು ಇನಾಂದಾರ್ರುಗಳು ದ್ರವ್ಯರೂಪಕವಾಗಿಯಾಗಲಿ ಅಥವಾ ಕಾಮಗಾರಿ ಮೂಲಕವಾಗಿಯಾಗಲಿ ಕೊಡಲು ಒಪ್ಪಿದ್ದಾರೆಂದು ವಗ್ಗೆರೆ ನಂಜನಗೂಡು ತಾಲ್ಲೂಕು ಅಮಲ್ದಾರ್ರಿಂದ ತಲುಪಿದ 16—5—07ನೆ ಮುಕ್ಕಂ 487ನೆ ನಂಬರು ರಿಪೋರ್ಟನ್ನು ಓದಲಾಯಿತು.

ಗ್ರಾಮಾಂತ್ರಗಳಿಗೆ ಹೊಸದಾಗಿ ಹಾಕತಕ್ಕ ರಸ್ತೆಗಳ ವಿಚಾರದಲ್ಲಿ ಗವರ್ನಮೆಂಟಿನಿಂದ ಸಾದರವಾಗಿರುವ 3—7—07ನೆ ಮುಕ್ಕಂ 64-72—L. B. 130-06—5ನೆ ನಂಬರು ಹುಕುಂನಲ್ಲಿ ವಿಧಾಯಕವಾಗಿರುವಂತೆ ಅಂದಾಜಾವನ್ನು ರಿವೈಸ್ ಮಾಡಿಸುವಂತೆ ತೀರ್ಮಾನವಾಯಿತು.

15. ಕೊಪ್ಪದ ಹೋಬಳಿ ಕೆರೆ ಮೇಲಣ ದೊಡ್ಡಿಯ ಬಳಿ ಬಂದು ಭಾವಿ ತೋಡಿಸುವದಕ್ಕಾಗಿ 422 ರೂಪಾಯಿಗಳ ಅಂದಾಜಾನಿಕೆ ಮಂಡ್ಯದ ತಾಲ್ಲೂಕು ಅಮಿಲ್ದಾರರಿಂದ ತಲುಪಿದ 21—8—07ನೆ ಮುಕ್ಕಂ 29ನೆ ನಂಬರು ರಿಪೋರ್ಟ್ಗಿನಿಕೆ ತಲುಪಿದ ನಡವಳಿಕೆಯನ್ನು ಓದಲಾಯಿತು.

ಹಾಲಿ ಈ ಬಾವಿಗೆ ನಡೆದಿರುವ ಕಾಮಗಾರಿಯನ್ನು ಸಬ್ ಡಿವಿಜ್ ಆಫಿಸರವರು ಅಜಮಾಯಿಷಿ ಮಾಡುವ ನಿರೀಕ್ಷಣೆ ಮೇಲೆ ಮುಂದಣ ವಿಾಟಿಂಗಿಗೆ ಆರ್ಡರ್ ಮಾಡಲಾಯಿತು.

16. ನಾಗಮಂಗಲದ ತಾಲ್ಲೂಕು ದಡಗದಲ್ಲಿ ಒಂದು ಸಂತೆ ಕಟ್ಟಲು ಏರ್ಪಾಡು ಮಾಡಬೇಕೆಂದು 28—8—07ನೆ ಮುಕ್ತಂನಲ್ಲಿ ನಾಗಮಂಗಲದ ತಾಲ್ಲೂಕು ಬೋರ್ಡಿನವರು ತೀರ್ಮಾನ ಮಾಡಿದ್ದರಮೇಲೆ ಅದರ ಎಕ್ಸ್‌ಟ್ರಾಕ್ಟನ್ನಿಕೆ ಫ್ರೆಂಚ್‌ರಾಕ್ಸ್ ಸಬ್ ಡಿವಿಜ್ ಆಫಿಸರವರಿಂದ ತಲುಪಿದ 13—9—07ನೆ ಮುಕ್ಕಂ 55ನೆ ನಂಬರು ಯಾದಾಸ್ತು ಓದಲಾಯಿತು.

ತಾಲ್ಲೂಕು ಬೋರ್ಡಿನವರು ಮಾಡಿರುವ ತೀರ್ಮಾನವನ್ನು ಅನುಮೋದಿಸಿರುವದಾಗಿಯೂ ಇದಕ್ಕಾಗಿ ಗವರ್ನಮೆಂಟ್ ಮಂಜೂರಾತಿ ಪಡೆಯಬೇಕೆಂತಲೂ ಸಹಾ ತೀರ್ಮಾನವಾಯಿತು.

17. 12—9—07ನೆ ಮುಕ್ಕಂನಲ್ಲಿ ನಡೆದ ಎಡತೊರೆ ತಾಲ್ಲೂಕು ಬೋರ್ಡ್ ವಿಾಟಿಂಗಿನಲ್ಲಿ ತೀರ್ಮಾನವಾದಂತೆ ಆ ತಾಲ್ಲೂಕಿನ ಉಗದೋಗಕ್ಕಾಗಿ ಒಂದು ಅಥವಾ ಎರಡು ಅಮೃತಮಹಲ್ ಗೂಳಿಗಳನ್ನು ಸರಬರಾಯಿ ಮಾಡಿಸಿಕೊಡಬೇಕೆಂದು ಎಡತೊರೆ ತಾಲ್ಲೂಕು ಅಮಿಲ್ದಾರರಿಂದ ತಲುಪಿದ 1—8—07ನೆ ಮುಕ್ಕಂ 116ನೆ ನಂಬರು ರಿಪೋರ್ಟು ಓದಲಾಯಿತು.

ಡಿಸ್ಟ್ರಿಕ್ಟ್ ಫಂಡಿನಿಂದ ಎಡತೊರೆ, ಹೆಗ್ಗಡದೇವನಕೋಟೆ, ಚಾಮರಾಜನಗರ ಈ ಮೂರು ತಾಲ್ಲೂಕುಗಳಿಗೆ ಪ್ರತಿ ಬ್ಯಂದು ತಾಲ್ಲೂಕಿಗೂ, ಬಂದೊಂದರ ಮೇರೆ ಅಮೃತಮಹಲ್ ಗೂಳಿಗಳನ್ನು ಕೊಂಡುಕೊಳ್ಳಬೇಕೆಂತಲೂ, ಬ್ಬವ್ರರಿ ಮಾಡಿಸಲ್ಪಡುವ ಪ್ರತಿ ಬಂದು ಹಸುವಿಗೂ, ಬಂದು ರೂಪಾಯಿನಂತೆ ಫೀಜು ವಸೂಲ್ಮಾಡಬೇಕೆಂತಲೂ, ಈ ರೀತಿ ವಸೂಲಾದ ಫೀಯಲ್ಲಿ ಅರ್ಧ ವೊಖ್ಖಲಗನ್ನು ಗೂಳಿಯ ಸಂರಕ್ಷಣಾರ್ಥವಾಗಿ ಅದನ್ನು ಕಾಪಾಡುವ ಛಾರ್ಜಿನಲ್ಲಿರುವ ಮನುಷ್ಯನಿಗೆ ಕೊಡಬೇಕೆಂತಲೂ ಸಹ ತೀರ್ಮಾನಿಸಲಾಯಿತು.

18. ಟಿ. ನರಸೀಪುರದ ತಾಲ್ಲೂಕಿನಲ್ಲಿರುವ ಸೋಸಲೆ ನರಸೀಪುರದ ರಸ್ತೆ ಶ್ರೀರಂಗಪಟ್ಟಣ, ಸೋಸಲೆ, ಶಿವನಸಮುದ್ರದ ರಸ್ತೆ ಇವುಗಳ ಮೈಲೇಜು ಅಲಾಟ್‌ಮೆಂಟನ್ನು ಮೈಲಿ ಬಂದಕ್ಕೆ 80 ರೂಪಾಯಿಗಳಿಗೆ ಬಡಾಯಿಸಬೇಕೆಂದು 30—8—07ನೆ ಮರ್ಕ್ಯಂನಲ್ಲ ತಿರಮಕೂಡ್ಲು ನರಸೀಪುರದಲ್ಲಿ ನಡೆದ ತಾಲ್ಲೂಕು ಬೋರ್ಡು ಮಿಟಿಂಗಿನಲ್ಲಿ ತೀರ್ಮಾನವಾಗಿರುವಂತೆ ಸದರಿ ಎಕ್ಸಟ್ರಾ ಕ್ಯುನಿಶಿ ನಂಜನಗೂಡು ಸಬ್ ಡಿವಿಜ್ಞ್ ಅಸಿಸ್ಟೆಂಟ್ ಕಮಿಷನರವರಿಂದ ತಲಪಿದ 26—9—07ನೆ ಮರ್ಕ್ಯಂ 38ನೆ ನಂಬರು ಯಾದಾಸ್ತು ಓದಲಾಯಿತು.

ನರಸೀಪುರ-ಸೋಸಲೆ ರಸ್ತೆಗೆ ಮಾತ್ರ ಮೈಲೇಜು ಅಲಾಟ್‌ಮೆಂಟ್ ಜಾಸ್ತಿ ಮಾಡತಕ್ಕದ್ದೆಂದು ತೀರ್ಮಾನಿಸಲಾಯಿತು.

19. 16—9—07ನೆ ಮರ್ಕ್ಯಂನಲ್ಲಿ ಚಾಮರಾಜನಗರದಲ್ಲಿ ನಡೆದ ತಾಲ್ಲೂಕು ಬೋರ್ಡು ಮಿಟಿಂಗಿನಲ್ಲಿ ತೀರ್ಮಾನವಾಗಿರುವಂತೆ ಜೋಡೆತ್ತಿನ ಚಕಡಾ ಗಾಡಿಗಳಿಂದ ಹಾಲಿ ಟೋಲು ಗೇಟುಗಳಲ್ಲಲ್ಲಿ ವಸೂಲಾಗುತ್ತಿರುವ ಟೋಲು ಮೊಬಲಗಿನಲ್ಲಿ ಅರ್ಧ ದರದಂತೆ ಟೋಲು ಮುಖಾಂತರ ಬರುವ ವಡ್ಡರ ಗಾಡಿಗಳಿಂದ ಟೋಲು ವಸೂಲಾಗತಕ್ಕ ವಿಚಾರವಲ್ಲಿ ಚಾಮರಾಜನಗರದ ತಾಲ್ಲೂಕು ಆಫೀಸಿಲರಿಂದ ತಲಪಿದ 25—9—07ನೆ ಮರ್ಕ್ಯಂ 79ನೆ ನಂಬರು ರಿಪ್ರೆರ್ಟನ್ನು ಓದಲಾಯಿತು.

ಈ ಸಲಹೆಯನ್ನು ಮಂಜೂರಾತಿ ಬಗ್ಗೆ ಗವರ್ನಮೆಂಟಿಗೆ ಕಳುಹಿಸಬೇಕೆಂದು ತೀರ್ಮಾನವಾಯಿತು.

20. ಹುಣಸೂರು-ಹನಗೋಡು ರಸ್ತೆಯಲ್ಲಿ ಅಡ್ಡವಾಗಿ ಬರುವ ವದರಿ (ನೀರಿನ ಪ್ರವಾಹ) ಗೆ ಸೇತುವೆ ಕಟ್ಟತಕ್ಕ ವಿಚಾರದಲ್ಲಿ ಮೆ॥ ಪಟ್ರಿಕ್‌ಹೇ ಸಾಹೇಬರು ವತ್ತು ಮೆ॥ ತಿರುವೆಂಗಡಸಾಮಿ ಮೊದಲಿಯಾರ್ರು ಸಹ, 1907 ನೆ ದಸರಾ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಚರ್ಚಿಸಬೇಕೆಂದು ಉದ್ದೇಕ ಮಾಡಿದ್ದ ವಿಷಯವನ್ನು ಓದಲಾಯಿತು.

ಬೋರ್ಡಿನವರು ಈ ಕಾಮಗಾರಿಯ ಅವಶ್ಯಕತೆಯನ್ನು ಆಲೋಚಿಸಿ ಈ ಕೆಲಸಕ್ಕಾಗಿ ಬೇಕಾಗುವ ಮೊಬಲಗಿನ ಅಂದಾಜಾವನ್ನು ತಯಾರು ಮಾಡಿಸಿ ಕಳುಹಿಸಲು ಎಗ್ಸಿಕ್ಯೂಟಿವ್ ಇಂಜಿನಿಯರವರಿಗೆ ಬರೆಸಬೇಕೆಂದು ತೀರ್ಮಾನಿಸಲಾಯಿತು.

21. ಮೈಸೂರು ತಾಲ್ಲೂಕು ಮೆಂಬರು ವಿ॥ ಲಿಂಗೇಗೌಡರು ಕಳುಹಿಸಿರುವ ಈ ಕೆಳಗಣ ಸಲಹೆಗಳನ್ನು ಓದಲಾಯಿತು.

(a) ನಾಗರ ಕಟ್ಟೆಯ ಬಳಿ ಇರುವ ಆನಂದೂರು ನಾಲಾಕ್ಕೆ ತಂತಿಗಳಿಂದ ಕಮಕಟೆ ಕಟ್ಟಿಸತಕ್ಕ ವಿಚಾರ.

(b) ಗ್ರಾಮಾಂತರಗಳಲ್ಲಿ ಹೊಸದಾಗಿ ಹಾಳಬೇಕಾದ ರಸ್ತೆಗಳನ್ನು ಗೊತ್ತು ಮಾಡುವದಕ್ಕಾಗಿ ಟ್ಯಾಂಕು ಇನ್‌ಸ್ಪೆಕ್ಟರು ಅಥವಾ ವರ್ಕ್ ಇನ್‌ಸ್ಪೆಕ್ಟರನ್ನು ನೇಮಿಸತಕ್ಕ ವಿಚಾರ.

(c) ಬಂದನೂರು ಮನೆಗಳಿಂತಲೂ ಜಾಸ್ತಿಯಾಗಿರುವ ಗ್ರಾಮಗಳಲ್ಲಿ ಗ್ರಾಮ ಪಾಕೀಜಾ ಉಸ್ತುವಾರಿ ನೋಡಿಕೊಳ್ಳುವ ತೋಟಿಗಳಿಗೆ ದ್ರವ್ಯರೂಪಕವಾದ ಪ್ರತಿ ಫಲ ಕೊಡಲ್ಪಡುವ ವಿಚಾರ.

(d) ಬೋಗಾದಿ ರಸ್ತೆಯನ್ನು ಜಟ್ಟಿಹುಂಡಿಯವರಿಗೂ ಬಡವಣೆ ಮಾಡತಕ್ಕ ವಿಚಾರ.

(e) ಅಯರ ಹಳ್ಳ ಮಾರ್ಗವಾಗಿ ಕಪಕೊಳವಿಂದ ಹವಿನಾರು ಗ್ರಾಮಕ್ಕೆ ಬಂದು ಬಂಡಿದಾರಿ ಹಾಕತಕ್ಕ ವಿಚಾರ.

(a) ನಾಗರ ಕಟ್ಟೆಯ ಆನಂದೂರು ನಾಲಾಕ್ಕೆ ಸಾಧಾರಣ ಮಂಜಿನಗೋಡೆ ಹಾಕಿಸಲು ಬಂದು ಅಂದಾಜಾ ತಯಾರು ಮಾಡಿಸಿ ಕಳುಹಿಸಲು ಎಕ್ಸಿಕ್ಯೂಟಿವ್ ಇಂಜನೀರವರಿಗೆ ಬರೆಸಬೇಕೆಂದು ತೀರ್ಮಾನಿಸಲಾಯಿತು.

(b) ಈ ವಿಚಾರದಲ್ಲಿ ಅವಶ್ಯಕವಾದ ನಿಗಾ ಕೊಡಲು ತಾಲ್ಲೂಕು ಅಮಿಲರುಗಳಿಗೆ ಬರೆಸಬೇಕೆಂದು ತೀರ್ಮಾನವಾಯಿತು.

(c) ಹೊಸದಾಗಿ ಡಿಸ್ಟ್ರಿಕ್ಟ್ ಸ್ಯಾನಿಟರಿ ಬೋರ್ಡು ಸ್ಥಾಪನೆಯಾದ ಮೇಲೆ ಈ ಸಲಹೆಯನ್ನು ಆ ಬೋರ್ಡಿಗೆ ಕಳುಹಿಸಬೇಕೆಂದು ತೀರ್ಮಾನಿಸಲಾಯಿತು.

(d) ಈ ಕೆಲಸ ನಡೆಸುವದಕ್ಕೆ ಬಂದು ಅಂದಾಜಾ ತಯಾರು ಮಾಡಿಸಿ ಕಳುಹಿಸಲು ಎಕ್ಸಿಕ್ಯೂಟಿವ್ ಇಂಜನೀರವರಿಗೆ ಬರೆಸಬೇಕೆಂದು ತೀರ್ಮಾನವಾಯಿತು.

(e) ಸಬ್ ಡಿವೀಜ್ಞ್ ಆಫಿಸರವರು ಸ್ಥಳ ಅಜವಾಯಿಷಿ ಮಾಡಿ ಅಭಿಪ್ರಾಯ ಬೆಳೆಸಲು ಅವರಿಗೆ ಬರೆಸಬೇಕೆಂದು ತೀರ್ಮಾನವಾಯಿತು.

22. ಗವರ್ನಮೆಂಟಿಗೆ ಕಳುಹಿಸಿಕೊಟ್ಟಿರುವ ಡಿಸ್ಟ್ರಿಕ್ಟ್ ಫಂಡು ಆಡಿತದ ರಿಪೋರ್ಟನ್ನು ಓದಲಾಯಿತು.

ರೆಕಾರ್ಡು ಮಾಡುವಂತೆ ತೀರ್ಮಾನವಾಯಿತು.

23. ಚಾಲ್ತಿ ಸಾಲಿನ ಬಜ್ಜೆಟ್ಟಿನಲ್ಲಿ ಬಿ.—"ಪಬ್ಲಿಕ್ ವರ್ಕ್ಸ್" ಎಂಬ ಹೆಡ್ಡಿನಲ್ಲಿ ಮಂಜೂರಾಗಿರುವ ಹಣವನ್ನು ಖರ್ಚು ಮಾಡಲು ಅಪ್ಪಣೆ ಬೇಡಿ ತಾಲ್ಲೂಕು ಬೋರ್ಡುಗಳಿಂದ ತಲಪಿದ ಎಸ್ಟಿಮೇಟುಗಳನ್ನು ಓದಲಾಯಿತು.

ಇದಕ್ಕೆ ಲಗ್ತಿತ್ತಿರುವ ತಖ್ತೆಯಲ್ಲಿ ನಮೂದಾಗುವ ಅಂದಾಜುಗಳನ್ನು ಮಂಜೂರು ಮಾಡಿರುವಂತೆ ತೀರ್ಮಾನಿಸಲಾಯಿತು.

24. ಮುಂದಣ ಡಿಸ್ಟ್ರಿಕ್ಟ್ ಬೋರ್ಡು ಮಿಟಿಂಗು 1908ನೆ ಇಸವಿ ಫೆಬ್ರವರಿ ಪಡಹೆ 15ನೆ ತಾರೀಖು ಶನಿವಾರ ಮಧ್ಯಾಹ್ನ 2 ಘಂಟೆಗೆ ನಡೆಸುವದೆಂದು ತೀರ್ಮಾನವಾಯಿತು.

ಎಂ. ಕಾಂತರಾಜೇ ಅರಸ್,
ಪ್ರೆಸಿಡೆಂಟ್.